## ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ

**ಸಿಸಿ ನಂಬರಃ 743/2024**

**ಸಿ.ಡಬ್ಲ್ಯೂಃ 1, ಪಿ.ಡಬ್ಲ್ಯೂಃ 4**

ಸಾಕ್ಷಿದಾರರ ಹೆಸರು : ಸೋಮರಾಜ್ ರಾಥೋಡ್

ತಂದೆಯ ಹೆಸರು : ಠಾಕರು ರಾಥೋಡ್

ವಯಸ್ಸು : 53 ವರ್ಷ

ಉದ್ಯೋಗ : ಪೊಲೀಸ್ ಉಪ ನಿರೀಕ್ಷಕರು, ಭಟ್ಕಳ ನಗರ ಪೊಲೀಸ ಠಾಣೆ

ವಾಸ್ತವ್ಯ : ಪೊಲೀಸ್ ವಸತಿ ಗೃಹ, ಸಾಗರ ರಸ್ತೆ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 07/11/2024**

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ 2014 ರಿಂದ 2021 ರವರೆಗೆ ಪೊಲೀಸ್ ಸಹಾಯಕ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ16.12.2023 ರಂದು ಚಾಸಾ – 6 , 8 , 9 ಇವರನ್ನು ಗಸ್ತು ಕರ್ತವ್ಯಕ್ಕೆ ಹೊರಟು ಅಲ್ಲಿಂದ ಹಳೆ ಬಸ್ಸು ನಿಲ್ದಾಣದ ಕಡೆಯಿಂದ ಜಾಲಿ ಕ್ರಾಸ್ ಹತ್ತಿರ ಹೋದಾಗ ಆರೋಪಿತನು ತನನ ಮನೆಯ ಹಿಂದುಗಡೆ 3 ಆಕಳು ಮತ್ತು 1 ಹೋರಿ ಕರುವನ್ನು ಹಿಂಸಾತ್ಮಕವಾಗಿ ಕಟ್ಟಿದ್ದ ಬಗ್ಗೆ ಅದನ್ನು ವದೆ ಮಾಡಿ ಮಾಂಸ ಮಾರಾಟ ಮಾಡುವದಕ್ಕಾಗಿ ಕಳು ಮಾಡಿಕೊಂಡು ಬಂದ ಬಗ್ಗೆ ಬಾತ್ಮಿ ದಾರರನುಮಾಹಿತಿ ನೀಡಿದಂತೆ ಸದರಿ ಮಾಹಿತಿಯನ್ನು ನಮ್ಮ ಮೇಲಾಧಿಕಾರಿಗೆ ತಿಳಿಸಿ ಅವರ ಮಾರ್ಗದರ್ಶನದಂತೆ ನಾನು , ಚಾಸಾ – 8 ರವರ ಸಹಾಯದಿಂದ 2 ಜನ ಪಂಚರನ್ನು ಬರಮಾಡಿಕೊಂಡು ಪಂಚರಿಗೆ ಸದರಿ ವಿಷಯ ತಿಳಿಸಿ ಪಂಚನಾ ಿಮ ಕಾಲಕ್ಕೆ ಪಂಚರಾಗಲು ಸಹಕರಿಸಲು ವಿನಂತಿಸಿಕೊಂಡು ಅವರು ಒಪ್ಪಿಕೊಂಡ ನಂತರ ನಾವು ಹಾಗೂ ಪಂಚರು ಜೀಪಿನ ಮೇಲೆ ಗುನ್ನಾ ಸ್ಥಳಕ್ಕೆ ಹೋಗಿ ಮನೆ ಯ ಹಿಂದೆ ನೋಡಲಾಗಿ ಜಾನುವಾರುಗಳನ್ನು ಹಗ್ಗದಿಂದ ಕಟ್ಟಿದ್ದು ಇದ್ದು ನಂತರ ಆರೋಪಿಗೆ ಕರೆದು ಸದರಿ ಜಾನುವಾರುಗಳ ಬಗ್ಗೆ ಯಾವುದಾದರು ದಾಖಲಾತಿಗಳನ್ನು ಕೊಡಲು ಕೇಳಿದಾಗ ಆತನು ಇಲ್ಲವೆಂದು ಹೇಳಿದ್ದರಿಂದ ಈ ಜಾನುವಾರು ಕಳುವು ಮಾಡಿಕೊಂಡ ವದೆ ಮಾಡಿ ಮಾಂಸ ಮಾರಾಟಕ್ಕೆ ತಂದ ಬಗ್ಗೆ ಖಾತರಿ ಮಾಡಿಕೊಂಡು ಪಂಚರ ಸಮಕ್ಷಮದಲ್ಲಿ ಪಂಚನಾಮೆಯಂತೆ 4 ಜಾನುವಾರು ಹಾಗೂ 4 ಹಗ್ಗ, ನನ್ನ ತಾಬಾಕ್ಕೆ ತೆಗೆದುಕೊಂಡು ಇರುತ್ತೇನೆ. ಹಗ್ಗದ ಕಿಮ್ಮತ್ತು ರೂ. 10 ರೂ, 4 ಜಾನುವಾರದ ಕಿಮ್ಮತ್ತು ರೂ. 20,000 ಆಗಿರಬಹುದು. ದಿಃ 16.12.2023 ರಂದು ಬೆಳಿಗ್ಗೆ 11.00 ರಿಂದ 12.30 ಗಂಟೆಯವರೆಗೆ ಪಂಚನಾಮೆಯನ್ನು ಚಾಸಾ –6 ರವರಿಂದ ಲ್ಯಾಪ್ ಟಾಪ್ ಮೂಲಕ ಬೆರಳಚ್ಚು ಮಾಡಿಸಿ ಪ್ರಿಂಟ್ ತೆಗೆದು ಪಂಚರ ಹಾಗೂ

ಸಿಬ್ಬಂದಿಗಳ ಸಹಿ ಪಡೆದು ಒಂದು ಖಾಸಗಿ ಗಾಡಿ ತರಿಸಿ ಸದರಿ ಗಾಡಿ ಮೇಲೆ 4 ಜಾನುವಾರು ಹಾಗೂ ಹಗ್ಗಗಳನ್ನು ಹಾಕಿ ಸಿಬ್ಬಂದಿಗಳ ಸಹಾಯದಿಂದ ಠಾಣಗೆ ತೆಗೆದುಕೊಂಡು ಹೋಗಿ ನನ್ನ ಪಿರ್ಯಾದಿಯೊಂದಿಗೆ ಜಾನುವರು ಸಮೇತ ಎಸ್ ಹೆಚ್ ಒ ಬಳಿ ಕಾನೂನಿನಂತೆ ಕ್ರಮ ಜರುಗಿಸಲು ಕೊಟ್ಟಿರುತ್ತೇನೆ.

3. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ– 4 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 4 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆಂದು ನುಡಿದಿರುತ್ತಾರೆ .

**ಪಾಟೀ ಸವಾಲು : ಆರೋಪಿ ಪರ ಶ್ರೀ ಎ ಆರ್ ಎಸ್ ವಕೀಲರಿಂದ,**

ಮಾಹಿತಿ ಬಂದಾಗ ನಾವು ಜಾಲಿ ಕ್ರಾಸ್ ಹತ್ತಿರ ಇದ್ದೇವು. ಜಾಲಿ ಕ್ರಾಸ್ ನಿಂದ ನಮ್ಮ ಠಾಣೆ ಸುಮಾರು 1 ಕಿಮಿ ದೂರದಲ್ಲಿ ಇದೆ. ಖಚಿತವಾದ ಮಾಹಿತಿ ಬಂದ ನಂತರ ನಾನು ಠಾಣೆಗೆಹೋಗಿ ದೂರು ದಾಖಲಿಸಿಲ್ಲ. ದೂರು ದಾಖಲಿಸುವ ಮೊದಲು ಸದರಿ ಪ್ರಕರಣದಲ್ಲಿ ಪಂಚನಾಮೆ ಮಾಡಿರುತ್ತೇನೆ. ಗೂನ್ನಾ ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತೇವೆ. ಗುನ್ನಾ ಸ್ಥಳದ ಮನೆಯ ಹಿಂದೆ ಖಾಲಿ ಜಾಗ ಇದೆ. ಗುನ್ನಾ ಸ್ಥಳದ ಮನೆಯ ಸುತ್ತ ಕಂಪೌಂಡು ಇದೆ. ಕಂಪೌಂಡ ಒಳಗೆ ಎಷ್ಟು ಜಾಗ ಖಾಲಿ ಇದೆ ಎಂದು ಹೇಳಲು ಆಗುವುದಿಲ್ಲ. ಗುನ್ನಾ ಸ್ಥಳ ಯಾರಿಗೆ ಸೇರಿದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ನಮ್ಮ ಪ್ರಕಾರ ಗುನ್ನಾ ಸ್ಥಳ ಆರೊಪಿಗೆ ಸೇರಿದ್ದು ಆಗಿದೆ. ಆರೋಪಿಯನ್ನು ವಿಚಾರಿಸಿದಾಗ ನನ್ನದೇ ಮನೆ ಎಂದು ಹೇಳಿರುತ್ತಾರೆ. ಆರೋಪಿಯಿಂದ ಟ್ಯಾಕ್ಸ ಪೇಡ್ ರಶೀದಿ , ಆರ ಟಿ ಸಿ ಯನ್ನು ಪಡೆದಿಲ್ಲ. ಪಂಚರನ್ನು ಬೆಳಿಗ್ಗೆ 10.30 ಗಂಟೆಗೆ ಚಾಸಾ –8 ರವರ ಮೂಲಕ ಕರೆಯಿಸಿರುತ್ತೇವೆ. ಪಂಚರಿಗೆ ನೊಟೀಸನ್ನು ನೀಡಿಲ್ಲ. ನಾನು , 2 ಜನ ಹವಾಲ್ದಾರ ಮತ್ತು ಪಿಸಿ ಗುನ್ನಾ ಸ್ಥಳಕ್ಕೆ ಪ್ರಥಮಬಾರಿಗೆ ಹೋಗಿರುತ್ತೇವೆ. ಪಂಚರನ್ನು ಎಲ್ಲಿಂದ ಕರೆದುಕೊಂಡು ಬಂದರು ಎಂದು ನನಗೆ ಗೊತ್ತಿಲ್ಲ. ಜಾನುವಾರು ಕಳುವಾದ ಬಗ್ಗೆ ನಮ್ಮ ಠಾಣೆಯಲ್ಲಿ ದೂರು ಒಂದು ಅಥವಾ 2 ವಾರಗಳ ಹಿಂದೆ ದಾಖಲಾಗಿಲ್ಲ. ದನಗಳನ್ನು ಸಾಕಬೇಕಾದರೆ ಪಶು ಇಲಾಖೆಯಿಂದ ಅನುಮತಿ ಪಡೆಯಬೇಕಾಗುತ್ತದೆ ಎಂದರೆ ಸರಿ. ಪಶು ಇಲಾಖೆಯವರು ಪ್ರತಿ ದನಗಳಿಗೆ ಅವುಗಳ ಕಿವಿಗಳಿಗೆ ಮಾರ್ಕ ಇರುವ ಚೀಟಿಯನ್ನು ಲಗತ್ತಿಸಿರುತ್ತಾರೆ. ಜಪ್ತು ಮಾಡಿದ ಜಾನುವಾರುಗಳು ಯಾರಿಗೆ ಸೇರಿದ್ದು ಎಂದು ನಾವು ಪಶು ಇಲಾಖೆಗೆ ವಿಚಾರಣೆ ಮಾಡಿಲ್ಲ. ದೂರನ್ನು ದಾಖಲಿಸುವ ಮೊದಲು ಯಾವದೇ ಇಲಾಖೆಯಿಂದ ಮಾಹಿತಿ ಪಡೆದಿಲ್ಲ. ನಾವು ಅಂದಾಜಿನ ಮೇರೆಗೆ ದೂರು ದಾಖ್ಲಿಲಿಸಿರುತ್ತೇವೆಎಂದರೆ

ಸರಿಯಲ್ಲ. ಮನೆಯಲ್ಲಿ ಸಾಕು ಜಾನುವಾರುಗಳಿಗೆ ಯಾವುದೇ ಮಾರ್ಕ ಹಾಕುವ ಪದ್ದತಿ ಇಲ್ಲ ಎಂರದೆ ಸರಿಯಲ್ಲ. ಎಲ್ಲಾ ದನಕರುಗಳಿಗೆ ಮಾರ್ಕ ಹಾಕುತ್ತಾರೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ. ಗುನ್ನಾ ಸ್ಥಳವು ಯಾವ ಸ್ಥಳವಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಘಟನೆಯಾಗುವ 2 ತಿಂಗಳ ಮೊದಲಿನಿಂದ ಹಾಗೂ ಅದರ ಮೊದಲೂ ಸಹ ನಾನು ಭಟ್ಕಳ ಶಹರ ಠಾಣೆಯಲ್ಲಿ ಕಾರ್ಯನಿರ್ವಹಿಸಿರುತ್ತೇನೆ. ಗುನ್ನಾ ಸ್ಥಳದ ಅಕ್ಕಪಕ್ಕದಲ್ಲಿ ಸುಮಾರು 25 –30 ಮನೆಗಳು ಇವೆ ಎಂದರೆ ಮನೆಗಳು ಇವೆ ಆದರೆ ಎಷ್ಟು ಮನೆಗಳು ಇವೆ ಎಂದು ಗೊತ್ತಿಲ್ಲ. ಗುನ್ನಾ ಸ್ಥಳದ ಅಕ್ಕಪಕ್ಕ ವಾಸದ ಮನೆಗಳು ಇವೆ ಎಂದು ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ನಾನೇ ದೂರು ದಾಖಲಿಸಿ ಬಾಗಶಃ ತನಿಖೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ –6 ರಿಂದ 9 ನಮ್ಮ ಇಲಾಖೆಯ ಸಿಬ್ಬಂದಿ ಆಗಿದ್ದಾರೆ . ಪಶು ವೈದ್ಯಾಧಿಕಾರಿಗಳ ಬಳಿ ಜಪ್ತು ಮಾಡಿದ ಜಾನುವಾರುಗಳನ್ನು ಪರೀಕ್ಷೆ ಯನ್ನು ತನಿಖಾಧಿಕಾರಿ ಮಾಡಿದ್ದು ನಾನು ದೂರನ್ನು ಮಾತ್ರ ದಾಖಲಿಸಿರುತ್ತೇನೆ. ಸದರಿ ಘಟನೆ ಬಂದಾಗ ನಾನು ಠಾಣೆಯ ಹತ್ತಿರ ಇದ್ದರೂ ಸಹ ನಾನು ಯಾವುದೇ ಮಾಹಿತಿ ಒಪ್ಪಿಸಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದ ಸ್ಥಳೀಯರನ್ನು ಪಂಚರಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ನಮಗೆ ಬೇಕಾದ ವ್ಯಕ್ತಿಯಿಂದ ಪಂಚನಾಮೆ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ಮನೆಯಲ್ಲಿ ಸಾಕಿದ ಜಾನುವಾರುಗಳನ್ನು ಅವರು ಕಳ್ಳತನ ಮಾಡಿದ್ದಾರೆ ಎಂದು ಅವರ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಜಾನುವಾರುಗಳಿಗೆ ಯಾವುದೇ ಟ್ಯಾಗುಗಳು ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಘಟನೆ ನಡೆದಾಗ ನಮ್ಮ ಠಾಣೆಯಲ್ಲಿ ಎಸ ಹೆಚ್ ಒ ಮತ್ತು ಪಿ ಎಸ್ ಐ ಇದ್ದರು. ಅವರನ್ನು ಕರೆಯಿಸಿ ಪಂಚನಾಮೆ ಕ್ರಮ ಕೈಗೊಳ್ಳಲು ನಾನು ಪ್ರಯತ್ನ ಮಾಡಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಠಾಣೆಯಲ್ಲಿ ಮಾಡಿದ್ದರೂ ಸಹ ಗೂನ್ನಾ ಸ್ಥಳದಲ್ಲಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಪೊಟೋದಲ್ಲಿ ಪ್ರಿಂಟರ್ ಕಾಣುತ್ತಿಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ಯಾವುದೇ ಘಟನೆ ನಡೆದಿಲ್ಲ ಹಾಗೂ ಆರೋಪಿತನು ಕಳ್ಳತನ ಮಾಡಿದ್ದಾನೆ ಎಂದರೆ ಸರಿಯಲ್ಲ. ದನಕರುಗಳನ್ನು ವಧೆ ಮಾಡಲು ಉಪಯೋಗಿಸಿದ ಯಾವುದೇ ಸಲಕರಣೆ ನಾವು ಜಪ್ತು ಮಾಡಿಲ್ಲ. ಜಪ್ತು ಮಾಡಿದ ಹಗ್ಗಗಳನ್ನು ಈ ದಿನ ನಾನು ನ್ಯಾಯಾಲಯದಲ್ಲಿ ನೋಡಿಲ್ಲ.
ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**